ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು

ಇವರ ನ್ಯಾಯಾಲಯದಲ್ಲಿ

**MVC** 912/2021

ಆರ್ ಡಬ್ಲು – 2

| | | |
|---|---|---|
| ಸಾಕ್ಷಿಯ ಹೆಸರು | : | ಸುನೀಲ್ ಸುರೇಶ್ ಶೆಟ್ಟಿ |
| ತಂದೆ ಹೆಸರು | : | ಸುರೇಶ್ |
| ವಯಸ್ಸು | : | **36** ವರ್ಷ |
| ಉದ್ಯೋಗ | : | ಡಿಪ್ಯೂಟ್ಯು ಮ್ಯಾನೇಜರ್ |
| ವಾಸ | : | ಹುಬ್ಬಳ್ಳಿ |

ಸಾಕ್ಷಿಯನ್ನು ದಿಃ **13.11.2025** ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

**ಮುಖ್ಯ ವಿಚಾರಣೆ : 2 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ಆಥರೈಸೇಷನ್ ಲೆಟರನ್ನು ನಿಆರ್–1

ಪಾಲಿಸಿ ಪ್ರತಿಯನ್ನು ನಿಆರ್ –2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಸಿ ಎಂ ವಕೀಲರಿಂದ ಃ**

ಮೋಟರ್ ಸೈಕಲ್ ನಂ.ಕೆಎ 16 ಇಕ್ಯೂ 2781 ಅಪಘಾತದಲ್ಲಿ ಭಾಗಿಯಾಗಿದ್ದರೂ ಸಹ ಭಾಗಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಸುಳ್ಳು ದೂರು ಕೊಟ್ಟಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಮರು ದಿನ ಆಸ್ಪತ್ರೆಯಲ್ಲಿ ಪೊಲೀಸರು ಅರ್ಜಿದಾರರಿಂದ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ನಿಜ. ಪಿ ಎಂ ವರದಿಯಲ್ಲಿ ಅರ್ಜಿದಾರರು ಯಾವ ರೀತಿ ಮೃತ ಪಟ್ಟಿದ್ದಾರೆ ಎಂದು ಬರೆದಿರುತ್ತಾರೆ ಎಂದರೆ ನಿಜ. ನಾನು ಪಿ ಎಂ ವರದಿ ನೋಡಿರುತ್ತೇನೆ. ಪಿ ಎಂ ವರದಿಯಲ್ಲಿ ಕಿಡ್ನಿ ಫೇಲ್ಯೂರಿನಿಂದ ಮೃತ ಪಟ್ಟ

ಎಂದು ಬರೆದಿಲ್ಲ ಎಂದರೆ ನಿಜ. ನಾವು ಈ ಅಪಘಾತದ ವಿಚಾರವಾಗಿ ಖಾಸಗಿ ತನಿಖೆ ಮಾಡಿಸಿರುವುದಿಲ್ಲ. ದೋಷಾರೋಪಣಾ ಪಟ್ಟಿ ಯನ್ನು ಪ್ರಶ್ನಿಸಿರುವುದಿಲ್ಲ. ಪರಿಹಾರ ಕೊಡಬೇಕೆಂದು ಸುಳ್ಳುಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು